ಸಂಪುಟ: 1 ಸಂಚಿಕೆ: 3 ಪುಟ: 4 ಸೆಪ್ಟೆಂಬರ್ 2017
* ಆಂತರಿಕ ಪ್ರಸರಣಕ್ಕೆ ಮಾತ್ರ

ಅರಿವು ಶಾಲೆಯ ಮಾಸಪತ್ರಿಕೆ

# ಅಂಗಳ

ಮಾಹಿತಿ, ಜ್ಞಾನ, ಸೃಜನಶೀಲತೆಗೊಂದು ವೇದಿಕೆ

ಸಂಪಾದಕರು: ಡಾ.ಎಂ.ಸಿ.ಮನೋಹರ
ಸಂಚಿಕೆ ಸಂಪಾದಕರು: ದಿವ್ಯಶ್ರೀ ಬಿ.ಎನ್.
www.arivu.org | e-mail: info@arivu.org

# ಆಗುಂಬೆ, ಕವಲೇದುರ್ಗ, ತಲಕಾಡಿನಲ್ಲಿ ಹಾರಾಡಿದ 'ಅರಿವು ಪಕ್ಷಿಗಳು'!

ಪ್ರಸಕ್ತ ಸಾಲಿನ ವಾರ್ಷಿಕ ಯೋಜನೆಯಂತೆ ಆಗಸ್ಟ್ 18, 19 ಮತ್ತು 20 ರಂದು ಶಾಲೆಯ ಮಕ್ಕಳಿಗೆ ಪ್ರವಾಸ ಹಮ್ಮಿಕೊಳ್ಳಲಾಗಿತ್ತು. 1 ರಿಂದ 3, 4 ರಿಂದ 6 ಮತ್ತು 7 ರಿಂದ 9ನೇ ತರಗತಿ ವಿದ್ಯಾರ್ಥಿಗಳನ್ನು ಪ್ರತ್ಯೇಕ ಗುಂಪುಗಳನ್ನಾಗಿ ಮಾಡಿ, ಏಕಕಾಲಕ್ಕೆ ಮೂರು ಪ್ರತ್ಯೇಕ ದಿಕ್ಕುಗಳಿಗೆ ಪ್ರವಾಸ ಕರೆದೊಯ್ದಿದ್ದು ಈ ವರ್ಷದ ವಿಶೇಷ.

1 ರಿಂದ 3ನೇ ತರಗತಿ ಮಕ್ಕಳು ಮುಡುಕುತೊರೆ, ತಲಕಾಡು, ಗಗನಚುಕ್ಕಿ, ಭರಚುಕ್ಕಿ ಪ್ರವಾಸಿ ತಾಣಗಳಿಗೆ ಭೇಟಿ ನೀಡಿದ್ದರು. ಮೊದಲಿಗೆ ಮುಡುಕುತೊರೆ ಬೆಟ್ಟವನ್ನು ಮೆಟ್ಟಿಲುಗಳನ್ನು ಎಣಿಸುತ್ತಾ ಹತ್ತಿದರು. ತಲಕಾಡಿನ ಐತಿಹಾಸಿಕ ಸ್ಥಳಗಳಿಗೆ ಭೇಟಿ ನೀಡಿ, ನಂತರ ಕಾವೇರಿ ನದಿ ತೀರದ ಮರಳಿನಲ್ಲಿ ಉತ್ಸಾಹದಿಂದ ಆಟವಾಡಿದರು. ಗೋಕರ್ಣ ಕಲ್ಯಾಣಿಯನ್ನು ವೀಕ್ಷಿಸಿದರು. ರಾತ್ರಿ ಮಳವಳ್ಳಿಯಲ್ಲಿ ವಾಸ್ತವ್ಯ ವಿದ್ದರು. ಈ ವೇಳೆ ವಿನ್ಮಯಿ ಅವರ ಪೋಷಕರ ತವರು ಮನೆಯವರು ಊಟೋ ಪಚಾರ ನೋಡಿಕೊಂಡರು. ಮರುದಿನ ಮಳೆಯ ನಡು ವೆಯೇ ಗಗನಚುಕ್ಕಿ, ಭರಚುಕ್ಕಿ ವೀಕ್ಷಣೆ ಮಾಡಿದರು. ಮೈಸೂರಿಗೆ ಹಿಂದಿರುಗುವ ಮಾರ್ಗ ಮಧ್ಯೆ ಚಿಕ್ಕಹಳ್ಳಿಯ ಮುನೇಶ್ವರ ದೇವರ ಆಲದ ಮರದಲ್ಲಿ ಮಕ್ಕಳು ಖುಷಿ ಯಿಂದ ಆಟವಾಡಿದರು. 'ಪ್ರವಾಸದಿಂದ ಖುಷಿಯಾಯ್ತು. ತುಂಬಾ ವಿಷಯ ತಿಳಿದು ಕೊಂಡೆವು. ಇನ್ನೂ ಹೆಚ್ಚು ದಿನ ಇರಬೇಕಿತ್ತು' ಎಂಬುದು ಮಕ್ಕಳ ಅನಿಸಿಕೆಯಾಗಿತ್ತು.



## ಕಣ್ಣುಗಳಿಗೆ ಮುದ ನೀಡಿದ ಹೊಸ ಪ್ರಪಂಚ

4 ರಿಂದ 6ನೇ ತರಗತಿ ಮಕ್ಕಳು ಆಗುಂಬೆ ಪ್ರವಾಸ ಕೈಗೊಂಡಿದ್ದರು. ಮೈಸೂರಿನಿಂದ ಶಿವಮೊಗ್ಗಕ್ಕೆ ರೈಲಿನಲ್ಲಿ, ಶಿವಮೊಗ್ಗದಿಂದ ಆಗುಂಬೆಗೆ ಬಸ್ಸಿನಲ್ಲಿ ಪ್ರಯಾಣ ಮಾಡಿದರು. ಆಗುಂಬೆ ಹೊಸ ಪ್ರಪಂಚದಂತೆ ಕಂಡು ಕಣ್ಣುಗಳಿಗೆ ಮುದ ನೀಡಿತು. ಅಲ್ಲಿನ ವಾತಾವರಣ ಮತ್ತು ಪ್ರಕೃತಿ ಮಕ್ಕಳಲ್ಲಿ ರೋಮಾಂಚನ ಉಂಟು ಮಾಡಿತು. ಮಕ್ಕಳ ಜತೆ ಬಂದಿದ್ದ ಸಂಪನ್ಮೂಲ ವ್ಯಕ್ತಿ ಮೋಹನಣ್ಣ ಅವರು, ಆಗುಂಬೆಯ ಕಪ್ಪೆಗಳು, ನಿತ್ಯಹರಿದ್ವರ್ಣದ ಕಾಡುಗಳ ಬಗ್ಗೆ ತಿಳಿಸಿದರು. ಮಕ್ಕಳು ಮಂಜಿನಲ್ಲಿ, ಇಬ್ಬನಿಯ ಜತೆ ನಲಿದರು. ಆಗುಂಬೆ 'ರೈನ್ಫಾರೆಸ್ಟ್ ರೀಸರ್ಚ್ ಸೆಂಟರ್'ಗೆ ನಡೆದು ಹೋಗಿ ಅಲ್ಲಿನ ಪ್ರಕೃತಿ, ಪ್ರಾಣಿ–ಪಕ್ಷಿ, ಕೀಟ, ಮರ, ಗಿಡ, ಮುಖ್ಯವಾಗಿ ಕಾಳಿಂಗ ಸರ್ಪಗಳ ಬಗ್ಗೆ ಸಂಶೋಧಕರೊಡನೆ ಮುಖಾಮುಖಿ ಸಂದರ್ಶನ ನಡೆಸಿದರು. ಶೃಂಗೇರಿಗೆ ಭೇಟಿ ನೀಡಿ ಅಲ್ಲಿನ ದೇವಾಲಯದ ವಾಸ್ತುಶಿಲ್ಪ, ಕಲೆ ಮತ್ತು ನದಿಯನ್ನು ವೀಕ್ಷಿಸಿದರು. 'ಸಿರಿಮನೆ ಫಾಲ್ಸ್'ನಲ್ಲಿ ಹಾಲಿನಂತೆ ಹರಿಯುವ ಜಲಧಾರೆಯಲ್ಲಿ ಮಕ್ಕಳು ಆಡಿ ಕುಣಿದರು. ಸಂಜೆ ಸೂರ್ಯಾಸ್ತಮಾನವನ್ನು ವೀಕ್ಷಿಸಿ, 20 ರಂದು ಬೆಳಗ್ಗೆ ಮಂಡ ಗದ್ದೆಯಲ್ಲಿ ಪಕ್ಷಿ ವೀಕ್ಷಣೆ ಮಾಡಿ ನಂತರ ಸಕ್ರೆಬೈಲಿನಲ್ಲಿ ಆನೆಗಳನ್ನೂ ನೋಡಿದರು. ಮಾವುತರ ಜತೆ ಮಾತನಾಡಿ ಆನೆಗಳ ಬಗ್ಗೆ ತಿಳಿದುಕೊಂಡರು.

## ನಾನೂರು ವರ್ಷಗಳ ಗತಕಾಲಕ್ಕೆ ಹರಿದ ಮನಸ್ಸು

7 ರಿಂದ 9ನೇ ತರಗತಿ ಮಕ್ಕಳು ಕವಲೇದುರ್ಗ ಪ್ರವಾಸಕ್ಕಾಗಿ ಮೈಸೂರಿನಿಂದ ಶಿವಮೊಗ್ಗವರೆಗೆ ರೈಲಿನಲ್ಲಿ ಪ್ರಯಾಣ ಬೆಳೆಸಿದರು. ಶಿವಮೊಗ್ಗದಿಂದ ಬಸ್ ಹಿಡಿದು ರಾಮಚಂದ್ರಾಪುರ ಮಠ ತಲುಪಿ ವಾಸ್ತವ್ಯ ಹೂಡಿದರು. ಬೆಳಗ್ಗೆ ಬೇಗ ಎದ್ದು ಮಠದವರು ನೀಡಿದ ಬಿಸಿನೀರಿನಲ್ಲಿ ಅಭ್ಯಂಜನ ಮುಗಿಸಿ, ತಿಂಡಿ ತಿಂದು ಜಿಟಿಜಿಟಿ ಮಳೆ ನಡುವೆಯೇ ಕವಲೇದುರ್ಗದ ಬುಡ ತಲುಪಿದರು. ಮಾರ್ಗದರ್ಶಕರಾದ ಪ್ರದೀಪ್ ಅವರೊಡನೆ ಚಾರಣ ಆರಂಭವಾಯಿತು. ಬಿದನೂರು ಸಂಸ್ಥಾನದ ಸಾಮಂತ ರಾಜರ ಏಳು ಸುತ್ತಿನ ಕೋಟೆ, ದೇವಸ್ಥಾನಗಳು, ಅರಮನೆಯ ಅವ ಶೇಷಗಳನ್ನು ತೋರಿಸುತ್ತ ಪ್ರದೀಪ್ ಮಕ್ಕಳನ್ನು ನಾನೂರು ವರುಷಗಳ ಗತಕಾಲಕ್ಕೆ ಕೊಂಡೊಯ್ದರು. ಅಲ್ಲಿಂದ ಸ್ವಲ್ಪ ಮೇಲೆ ಬೃಹದಾಕಾರದ ಏಕಶಿಲೆಯ ನೆತ್ತಿಯಲ್ಲಿ ಭಗ್ನಗೊಂಡ ಶಿವಾಲಯವನ್ನು ಕಂಡು, ಅಲ್ಲಿನ ಮಳೆ, ಚಳಿ–ಗಾಳಿಗಳಿಗೆ ಹೆಚ್ಚು ಕಾಲ ಮೈಯೊಡ್ಡಲಾಗದೆ ಕೆಳಗಿಳಿದು ಬರಬೇಕಾಯಿತು.

ಅಲ್ಲಿಂದ ದೇವಗಂಗಾ ಎನ್ನುವ ರಾಜರ ಕಾಲದ ಪ್ರಾಕೃತಿಕ ಈಜುಕೊಳಕ್ಕೆ ಭೇಟಿಯಿತ್ತು, ಚಳಿಯಲ್ಲಿಯೇ ಮುಳುಗು ಹಾಕಿದ ಮಕ್ಕಳು ಈಜುವ ಶಾಸ್ತ್ರ ಮುಗಿಸಿದರು. ಬಳಿಕ ರಾಮಚಂದ್ರಾಪುರಕ್ಕೆ ಹಿಂದಿರುಗುವ ಹಾದಿಯಲ್ಲಿ ಮುಸ್ಸಂಜೆಯ ಮೋಡ ಕವಿದ ವಾತಾವರಣದಲ್ಲಿ ಕೋಟೆ ಬುರುಜುಗಳನ್ನು ಹತ್ತಿ ನೋಡಿದಾಗ ಹಚ್ಚ ಹಸಿರು ತೊಟ್ಟು ನಿಂತ ಸುತ್ತಲಿನ ವನಸಿರಿ, ಹಾವಿನಂತೆ ಹರಿಯುವ ನದಿ, ಬೆಟ್ಟ–ಗುಡ್ಡಗಳು ಬೇರೆಯದೇ ಲೋಕ ತೆರೆದಿದ್ದವು. ಮರುದಿನ ರಾಮಚಂದ್ರಾಪುರ ಮಠದ ದೇಸೀ ತಳಿ ಸಂರಕ್ಷಣಾ ಕೇಂದ್ರದಲ್ಲಿ ಹಲವಾರು ತಳಿಯ ದನಗಳ ಆಕೃತಿ, ಗಾತ್ರವನ್ನು ಕಂಡು ಮಕ್ಕಳು ಬೆರಗಾದರು.

**। ವಿಶ್ವನಾಥ, ಚೇತನಾಭಟ್, ಮಹೇಶ್ವರಿ ಎಂ.ಎಂ, ಶಿಕ್ಷಕರು**



## ಸಂಪಾದಕೀಯ

ಆತ್ಮೀಯ ಓದುಗರೇ,

‘ಅಂಗಳ’ ಮಾಸಪತ್ರಿಕೆಯ ಮೂರನೇ ಸಂಚಿಕೆ ಇದಾಗಿದ್ದು, ಪತ್ರಿಕೆಗೆ ಕಥೆ, ಕವನ, ಲೇಖನಗಳನ್ನು ಬರೆಯಲು ಮಕ್ಕಳಲ್ಲಿ ಆಸಕ್ತಿ ಹೆಚ್ಚಾಗಿರುವುದು ಸಂತಸ ತಂದಿದೆ.

ಸಂಪನ್ಮೂಲ ವ್ಯಕ್ತಿಗಳು, ಶಿಕ್ಷಕರು, ಮಕ್ಕಳು ತಮ್ಮ ಸುತ್ತಮುತ್ತಲಿನ ಘಟನೆ, ಓದಿದ ವಿಷಯ, ಸ್ವಯಂ ಆಲೋಚನೆ, ಅನಿಸಿಕೆ, ಅನುಭವಗಳನ್ನು ಈ ಸಂಚಿಕೆಯಲ್ಲಿ ಮನಮುಟ್ಟುವಂತೆ ಹಂಚಿಕೊಂಡಿದ್ದಾರೆ.

ಉಳಿದಂತೆ, ಪ್ರತಿ ವರ್ಷದಂತೆ ಈ ಬಾರಿಯೂ ನಮ್ಮ ಶಾಲೆಗೆ ಜರ್ಮನಿಯಿಂದ ಇಬ್ಬರು ಸ್ವಯಂಸೇವಕರು(ಲೆನಾ ಮತ್ತು ಬೆನ್) ಬಂದಿದ್ದಾರೆ. ಈ ಬಾರಿಯ ಸ್ವಾತಂತ್ರ್ಯ ದಿನಾಚರಣೆ ಅರ್ಥಪೂರ್ಣವಾಗಿ ನಡೆದಿದೆ. ಪ್ರತಿ ವರ್ಷದಂತೆ ವಿಷಯಾಧಾರಿತ ಕಲಿಕೆಯಲ್ಲಿ ಈ ವರ್ಷ ‘ಹಣ’ ಎಂಬ ವಿಷಯವನ್ನಿಟ್ಟುಕೊಂಡು ಮಕ್ಕಳು ಮತ್ತು ಶಿಕ್ಷಕರು ಕಲಿಕೆಯಲ್ಲಿ ತೊಡಗಿದ್ದಾರೆ.

1 ರಿಂದ 9ನೇ ತರಗತಿ ಮಕ್ಕಳು ಶೈಕ್ಷಣಿಕ ಪ್ರವಾಸಕ್ಕೆ ಹೋಗಿ ಆನಂದಿಸುವುದರ ಜತೆಗೆ ಹೊಂದಾಣಿಕೆ, ಸಮಯಪ್ರಜ್ಞೆ ಮತ್ತು ಕಲಿಕಾ ಅನುಭವಗಳನ್ನು ಹೆಚ್ಚಿಸಿಕೊಂಡರು. ಮಂಜುನಾಥ್ ಲತಾ ಅವರು 8–9ನೇ ತರಗತಿ ಮಕ್ಕಳಿಗೆ ಕನ್ನಡ ಬರಹ ಕಾರ್ಯಾಗಾರವನ್ನು ನಡೆಸಿದರು. ನಮ್ಮ ಶಾಲೆಗೆ ಪ್ರತಿ ತಿಂಗಳು ಸಂದರ್ಶಕರು ಬರುತ್ತಿರುವುದು ಸಂತಸ ತಂದಿರುವುದರ ಜತೆಗೆ ನಮ್ಮ ಜವಾಬ್ದಾರಿಯನ್ನೂ ಹೆಚ್ಚಿಸಿದೆ.

‘ಅಂಗಳ’ದ ಮೂರನೇ ಸಂಚಿಕೆಯನ್ನು ಸಂಪಾದಿಸಲು ಅವಕಾಶ ಮಾಡಿಕೊಟ್ಟ ಅರಿವು ಆಡಳಿತ ಮಂಡಳಿ ಮತ್ತು ಲೇಖನಗಳನ್ನು ಬರೆದ ಎಲ್ಲರಿಗೂ ತುಂಬು ಹೃದಯದ ಧನ್ಯವಾದಗಳು.




। ದಿವ್ಯಶ್ರೀ ಬಿ.ಎನ್.
ಸಂಚಿಕೆ ಸಂಪಾದಕರು

**ಆಗಸ್ಟ್ ತಿಂಗಳಿನಲ್ಲಿ ಶಾಲೆಗೆ ಭೇಟಿ ನೀಡಿದವರು**

1. ಆರ್.ಸಂಗೀತ, ವಿದ್ಯಾರ್ಥಿನಿ
2. ಬಿ.ಸಂದೇಶ್, ಗ್ರಾಫಿಕ್ ಡಿಸೈನರ್
3. ಜಯಲಕ್ಷ್ಮೀ ಹಾನಗಲ್, ತಾಂತ್ರಿಕ ವಿಜ್ಞಾನಿ
4. ಪ್ರತಿಭಾ ಕುಲಕರ್ಣಿ, ಮುಖ್ಯ ಶಿಕ್ಷಕರು, ಬಾಲಬಳಗ ಶಾಲೆ, ಧಾರವಾಡ
5. ಡಾ.ಕೆ.ಪಿ. ಮಹಾದೇವಪ್ಪ, ಸಾಹಿತಿ
6. ಲೆನಾ ಮತ್ತು ಬೆನ್, ಜರ್ಮನಿಯ ಸ್ವಯಂ ಸೇವಕರು(ಎಫ್.ಎಸ್.ಎಲ್. ಸಂಸ್ಥೆಯಿಂದ)

# ಸಾಹಿತ್ಯದೆಡೆಗೆ ಮಕ್ಕಳ ನಡಿಗೆ...

ಮಕ್ಕಳು ಶಾಲಾ ಹಂತದಲ್ಲೇ ಭಾಷಿಕ ಸಾಮರ್ಥ್ಯವನ್ನು ಪಡೆದುಕೊಳ್ಳುತ್ತಾ ಸಾಹಿತ್ಯದೆಡೆಗೆ ತಮ್ಮನ್ನು ತೆರೆದುಕೊಳ್ಳುವ ಆಶಯದಿಂದ 5 ರಿಂದ 9 ನೇ ತರಗತಿ ಮಕ್ಕಳಿಗೆ ಸಾಹಿತಿ ಹಾಗೂ ಪತ್ರಕರ್ತರಾದ ಮಂಜುನಾಥ್‌ಲತಾ ಅವರು ಜೂನ್‌ನಿಂದ ಇಲ್ಲಿಯವರೆಗೆ ಒಟ್ಟು 6 ಕಾರ್ಯಾಗಾರಗಳನ್ನು ನಡೆಸಿಕೊಟ್ಟಿದ್ದಾರೆ. ಕವಿತೆ, ಪ್ರಬಂಧ, ಕಥೆ, ಲೇಖನಕ್ಕೆ ಸಂಬಂಧಿಸಿದಂತೆ ಹಾಗೂ ಅವುಗಳ ರಚನಾ ಕ್ರಮವನ್ನು ಅರ್ಥವತ್ತಾಗಿ ತಿಳಿಸಿಕೊಟ್ಟಿದ್ದಾರೆ. ಕಲಿಕಾರ್ಥಿಗಳ ಆಸಕ್ತಿ ಮತ್ತು ಉಲ್ಲಾಸವನ್ನು ಗಮನದಲ್ಲಿರಿಸಿಕೊಂಡು ಕಥೆ, ಕಾವ್ಯ, ಪ್ರಬಂಧ ರಚನೆಗೆ ಸೂಕ್ತ ಮಾರ್ಗದರ್ಶನ ನೀಡಿದ್ದಾರೆ.



ವಿದ್ಯಾರ್ಥಿಗಳು ತಪ್ಪೋ... ನೆಪ್ಪೋ.... ಕಥೆ, ಕಾವ್ಯ ಬರೆಯಲು ಶುರು ಮಾಡಿದ್ದಾರೆ. ಇದರಿಂದ ಅವರ ಶಬ್ದ ಭಂಡಾರ, ಪದಗಳು, ವಾಕ್ಯಗಳನ್ನು ಜೋಡಿಸುವ ರೀತಿ ಸುಂದರಗೊಳ್ಳುತ್ತಿದೆ. ಪದ್ಯಗಳನ್ನು, ಪ್ರಬಂಧಗಳನ್ನು ಓದುವ ಕಡೆ ಆಸಕ್ತಿ ಹೆಚ್ಚಾಗುತ್ತಿದೆ. ಸಾಹಿತ್ಯ ಪ್ರಕಾರದ ಭಾಗಗಳನ್ನು ಅರ್ಥೈಸಿಕೊಳ್ಳುವ ಕಡೆ ಗಮನಹರಿಸಿದ್ದಾರೆ. ಇದರಿಂದ ಸ್ವ ಸಾಮರ್ಥ್ಯ, ಸ್ವ ಪ್ರಯೋಗಶೀಲ, ಸೃಜನಶೀಲ ಗುಣಗಳು ಸಹಜವಾಗಿಯೇ ಹೆಚ್ಚುತ್ತಿವೆ. ‘ಅಂಗಳ’ ಪತ್ರಿಕೆಗಾಗಿ ಹಾಗೂ ಕಾರ್ಯಾಗಾರಗಳಲ್ಲೂ ಸಾಕಷ್ಟು ಲೇಖನಗಳನ್ನು ಬರೆಯುವುದನ್ನು ರೂಢಿಸಿಕೊಂಡಿದ್ದಾರೆ. ಯೋಚನಾಶಕ್ತಿ, ಕಲ್ಪನಾ ಶಕ್ತಿ, ಭಾಷೆ ಹಾಗೂ ಜ್ಞಾನವನ್ನು ಬೆಳೆಸಿಕೊಳ್ಳುತ್ತಾ ಸಾಗುತ್ತಿರುವ ಈ ಮಕ್ಕಳಲ್ಲಿ ಭಾವಿ ಕವಿ/ಕವಯತ್ರಿಯರನ್ನು ಕಾಣಬಹುದು. ಕನ್ನಡ ಭಾಷಾ ಶಿಕ್ಷಕಿಯಾಗಿ ನಾನು ಬರವಣಿಗೆಯಲ್ಲಿ ಹೆಚ್ಚೆಚ್ಚು ತೊಡಗಿಸಿಕೊಳ್ಳಲು ಈ ಕಾರ್ಯಾಗಾರ ಸಹಕಾರಿಯಾಗಿದೆ.



। ಮಂಜುಳಾ ಎಂ., ಶಿಕ್ಷಕಿ

## ಜೋಕು ಜೋಕಾಲಿ

ಆಟದ ತರಗತಿಯಲ್ಲಿ ಸೂರ್ಯ ಜೋಕಾಲಿಯಲ್ಲಿ ಆಡುತ್ತಿದ್ದನು. ಪ್ರಜ್ಞಾ–ಸಹನರೂ ಓಡಿ ಬಂದಾಗ, ಪ್ರಜ್ಞಾಳಿಗೆ ಜೋಕಾಲಿ ಸಿಗಲಿಲ್ಲ. ಆಗ ಲೋ ಸೂರ್ಯ, ಕಟ್ಟೆಯಲ್ಲಿ ಕುಳಿತಿರುವವರಲ್ಲಿ ಬರ್ಟಿ ಮಾಮ ಯಾರು, ಮನು ಅಣ್ಣ ಯಾರು ಗೊತ್ತಾ? ತೋರಿಸು ಎಂದಳು. ಈ ವರ್ಷ ಬಂದ ಹೊಸ ಹುಡುಗ ಸೂರ್ಯ ಉತ್ಸಾಹದಿಂದ ಮಾಮ, ಅಣ್ಣರನ್ನು ಸಮೀಪಿಸಿ ಇಬ್ಬರನ್ನೂ ತೋರಿಸುತ್ತಾ ಪ್ರಜ್ಞಾಳನ್ನು ನೋಡಲು, ತುಂಟ ನಗೆಯ ಹುಡುಗಿ ಜೋಕಾಲಿಯನ್ನು ಹಿಡಿದು, ನನಗೂ ಅವರು ಗೊತ್ತು. ನನಗೆ ಬೇಕಾದ್ದು ಜೋಕಾಲಿ ಎಂದಳು ಜೀಕುತ್ತಾ.

। ರಜನಿ ಜೆ., ಸಂಪನ್ಮೂಲ ವ್ಯಕ್ತಿ



# ಪ್ರಾಮಾಣಿಕತೆಯ ದಾರಿಯಲ್ಲಿ ನಡೆದ ಪುಟಾಣಿ

‘ಹಣ’ ಈ ವರ್ಷದ ವಿಷಯಾಧಾರಿತ ಕಲಿಕೆಯ ವಿಷಯ. ಹಣಕ್ಕೆ ಸಂಬಂಧಿಸಿದಂತೆ ಮಕ್ಕಳಿಗೆ ಕಲಿಸಲು ಆಯ್ದುಕೊಂಡ ಒಂದು ಪರಿಕಲ್ಪನೆ ಲಾಭ–ನಷ್ಟ. ಇದಕ್ಕೆ ಸಂಬಂಧಿಸಿದಂತೆ ಮಕ್ಕಳಿಂದ ಉಲ್ಲನ್ನಿನ ಸಣ್ಣ ಉತ್ಪನ್ನಗಳನ್ನು ಮಾಡಿಸಿ, ಮಾರಾಟ ಹಮ್ಮಿಕೊಂಡಿದ್ದೆ. ಸ್ವಾತಂತ್ರ್ಯ ದಿನಾಚರಣೆಯ ಹಿಂದಿನ ದಿನ ತ್ರಿವರ್ಣ ಉತ್ಪನ್ನಗಳ ಮಾರಾಟದ ಸಡಗರ ಶುರುವಾಯಿತು. ಆ ಕ್ಷಣದಲ್ಲಿ ಅಲ್ಲಿ ಕೊಳ್ಳುವವರ ಕಾತುರ, ಹಣವಿಲ್ಲದೇ ಇರುವ ಮಕ್ಕಳ ಬೇಸರ, ಸಂಭ್ರಮ ಮಾರುಕಟ್ಟೆಗೆ ಕಳೆ ತಂದಿತ್ತು. ಹಣ ತಂದಿರದ ಮಕ್ಕಳು ಸಾಲ ಮಾಡಿ ಕೊಂಡುಕೊಳ್ಳಲು ಅಕ್ಕ, ಅಣ್ಣಂದಿರನ್ನು ಕೇಳಲು ಶುರು ಮಾಡಿದ್ದರು. ಕೆಲವರು ತಮ್ಮ ಹೆಸರು ಬರೆಸಿ ಮಾರನೇ ದಿನ ಹಣ ಕೊಡುವುದಾಗಿ ಮಾತುಕೊಟ್ಟರು. ಹೀಗೆ ಸುಮಾರು 20–25 ಮಕ್ಕಳು ಸಾಲ ಮಾಡಿದರು. ಮಾರನೇ ದಿನ ಹಣ ತಂದುಕೊಟ್ಟರು. ಹಬ್ಬದ ಮಾರನೆಯ ದಿನ ಶಾಲೆ ಮುಗಿದು ಮಕ್ಕಳು ಹೊರಟಾಗ ಒಬ್ಬ ಪುಟಾಣಿ ಉಲ್ಲನ್ನಿನ ಬ್ಯಾಂಡ್ ಹಿಡಿದು, ನನ್ನ ಬಳಿ ಬಂದು, ‘ಅಕ್ಕ ನಾನು ಹಣ ತಂದಿಲ್ಲ, ಅಪ್ಪ–ಅಮ್ಮ ಎಷ್ಟು ಕೇಳಿದರೂ ಕೊಡಲಿಲ್ಲ. ಹಾಗಾಗಿ ವಾಪಾಸ್ ತಗೊಳ್ಳಿ’ ಎಂದು ಸಪ್ಪೆ ಮೋರೆ ಹಾಕಿಕೊಂಡು ಗಟ್ಟಿಯಾಗಿ ಉಲ್ಲನ್ ಬ್ಯಾಂಡ್ ಹಿಡಿದುಕೊಂಡೇ ಹೇಳಿದನು. ನಾನು ಅವನಿಗೆ, ‘ನಿನಗೆ ಇದು ಬೇಕಾ?’ ಎಂದು ಕೇಳಿದೆ. ತಕ್ಷಣ ಆತನ ಕಣ್ಣುಗಳು ನೀರಿನ ಕೊಳಗಳಾದವು. ಆಸೆ, ಪ್ರಾಮಾಣಿಕತೆಯನ್ನು ಮೆಚ್ಚಿ ಅವನಿಗೇ ಬ್ಯಾಂಡ್ ಕೊಟ್ಟೆ. ಅವನು ಸಂತಸದಿಂದ ಕುಣಿಯುತ್ತಾ ಹೋಗುವಾಗ, ಇದೆಲ್ಲವನ್ನೂ ನೋಡುತ್ತಿದ್ದ ದಿವ್ಯಕ್ಕ, ‘ಅಕ್ಕ ನಾನು ಅದರ ಹಣ ಕೊಡುತ್ತೇನೆ. ನಿಮ್ಮ ಗುಂಪಿನ ಮಕ್ಕಳಿಗೆ ಲೆಕ್ಕ ಸರಿಯಾಗಲಿ’ ಎಂದು ಹಣ ಕೊಟ್ಟರೂ ಕೂಡ.

ಹಣ ಕೊಡದಿರುವ, ಸುಳ್ಳು ಹೇಳುವ ಆಯ್ಕೆಗಳು ಇದ್ದಾಗಲೂ ಪ್ರಾಮಾಣಿಕತೆಯ ಅರಿವಿನ ದಾರಿಯಲ್ಲಿ ನಡೆದ ಮಗುವಿಗೆ ನನ್ನ ಶುಭ ಹಾರೈಕೆಗಳು.



। ರಜನಿ ಜೆ., ಸಂಪನ್ಮೂಲ ವ್ಯಕ್ತಿ

# ಭಾರತ-ಪಾಕಿಸ್ತಾನ ಒಂದಾದೆವು!

ಒಂದು ದಿನ ಭಾರತ ಮತ್ತು ಪಾಕಿಸ್ತಾನ ನಡುವೆ ಯುದ್ಧ ನಡೆದಿತ್ತು. ಆಗ ಭಾರತದವರು ಹೇಳಿದರು, 'ಸಾಕು ನಿಲ್ಲಿಸಿ ಈ ಯುದ್ಧವನ್ನು, ಇಬ್ಬರೂ ಗೆಳೆಯರಾಗಿರೋಣ' ಎಂದು. ಆಗ ಪಾಕಿಸ್ತಾನದವರೂ ಒಪ್ಪಿಕೊಂಡರು. ಆವಾಗಿನಿಂದ ಇಬ್ಬರೂ ಖುಷಿಯಿಂದ ಇದ್ದರು.



। **ಸಮರ್ಥ.ಕೆ.ಎಸ್.,**
2ನೇ ತರಗತಿ

# ನೀರು ಶುದ್ಧೀಕರಣ ಪ್ರಾತ್ಯಕ್ಷಿಕೆ ವೀಕ್ಷಣೆ

ಆಗಸ್ಟ್ 10 ರಂದು 5 ಮತ್ತು 6ನೇ ತರಗತಿ ಮಕ್ಕಳು ಶಿಕ್ಷಕರಾದ ಸುಮಾ ಮತ್ತು ರಮೇಶ್ ಅವರೊಂದಿಗೆ ಮೈಸೂರಿನ ಯಾದವಗಿರಿಯ ವಾಣಿವಿಲಾಸ ಜಲ ಶುದ್ಧೀಕರಣ ಘಟಕಕ್ಕೆ ಭೇಟಿ ನೀಡಿದ್ದರು. ಬೆಳಗೊಳದ ಪಂಪ್‌ಹೌಸ್‌ನಿಂದ ಕಾವೇರಿ ನದಿ ನೀರು ಈ ಘಟಕಕ್ಕೆ ತಲುಪಿ ಹಂತ ಹಂತವಾಗಿ ಶುದ್ಧೀಕರಣಗೊಳ್ಳುವುದನ್ನು ಅಲ್ಲಿನ ಸಿಬ್ಬಂದಿ ನಾಗೇಂದ್ರ ಅವರು ಮಕ್ಕಳಿಗೆ ಅರ್ಥವಾಗುವಂತೆ ವಿವರಿಸಿದರು. ನೀರನ್ನು ಶುದ್ಧೀಕರಿಸಲು ಕ್ಲೋರಿನ್, ಸ್ಫಟಿಕದ(ಆಲಮ್) ಬಳಕೆ ಮತ್ತು ಅವುಗಳ ಪ್ರಮಾಣ ಬಹುಮುಖ್ಯ ಎಂಬುದನ್ನು ಮಕ್ಕಳು ತಿಳಿದುಕೊಂಡರು.

ಮನೆಗಳಿಗೆ ಸರಬರಾಜಾಗುವ ಮೊದಲು ನಾವು ಕುಡಿಯುವ ನೀರು ಪ್ರಯೋಗಕ್ಕೆ ಒಳಗಾಗುತ್ತದೆ ಎಂಬುದರ ಪ್ರಾತ್ಯಕ್ಷಿಕೆಯನ್ನು ಆಸಕ್ತಿಯಿಂದ ವೀಕ್ಷಿಸಿ ಆಶ್ಚರ್ಯಪಟ್ಟರು. ಈ ಘಟಕದಲ್ಲಿ ಶುದ್ಧೀಕರಿಸಿದ ನೀರು ಜೆ.ಪಿ.ನಗರದ ಟ್ಯಾಂಕ್‌ನಲ್ಲಿ ಸಂಗ್ರಹಗೊಂಡು ಸುತ್ತಲಿನ ಬಡಾವಣೆಗಳಿಗೆ ಪೂರೈಕೆಯಾಗುತ್ತದೆ. ಈ ರೀತಿಯ 3 ಜಲಶುದ್ಧೀಕರಣ ಘಟಕಗಳು ಮೈಸೂರಿನಲ್ಲಿ ಇವೆ ಎಂಬುದನ್ನು ತಿಳಿದುಕೊಂಡರು. ಕಡೆಗೆ ಎಲ್ಲ ಸಿಬ್ಬಂದಿಗೆ ವಂದಿಸಿ ಶಾಲೆ ಕಡೆಗೆ ನಡೆದರು.



ನೀರು ಶುದ್ಧೀಕರಣ ಘಟಕ ವೀಕ್ಷಿಸುತ್ತಿರುವುದು

# ಅನುಭವ ಕಲಿಸುವ ಸಹಿಷ್ಣುತೆ



ಬಳ್ಳಾಪುರದಲ್ಲಿ ಶೇಖರನೆಂಬ ರೈತನೊಬ್ಬನಿದ್ದನು. ಅವನು ತಕ್ಕಮಟ್ಟಿಗೆ ವಿದ್ಯಾಭ್ಯಾಸ ಮಾಡಿ ಹೊಲಗದ್ದೆಗಳ ಕೆಲಸವನ್ನು ಶ್ರದ್ಧೆಯಿಂದ ಮಾಡುತ್ತಿದ್ದನು. ಅವನಿಗೆ ಹೇಳಿಕೊಳ್ಳುವಷ್ಟು ಜಮೀನು ಇಲ್ಲದಿದ್ದರೂ ಸಾಕಷ್ಟು ನೆಲವಿತ್ತು. ಅವನು ಶ್ರಮಪಟ್ಟು ಕೆಲಸ ಮಾಡಿದರೂ ಅದೃಷ್ಟ ಉತ್ತಮವಾಗಲೇ ಇಲ್ಲ. ಜೀವನದಲ್ಲಿ ಬಹಳ ಬೇಸರಗೊಂಡ ಅವನು, ಒಬ್ಬ ಪ್ರಸಿದ್ಧ ಜೋಯಿಸರಲ್ಲಿ ತನ್ನ ಭವಿಷ್ಯವನ್ನು ಕೇಳಲು ನಿರ್ಧರಿಸಿದನು. ಆ ವೇಳೆಗೆ ಅವನಿಗೆ 26 ವರ್ಷ ತುಂಬಿತ್ತು. ಜ್ಯೋಯಿಸನನ್ನು ಸಂದರ್ಶಿಸಿ ತನ್ನ ಆಯುಷ್ಯ, ಐಶ್ವರ್ಯ ಮೊದಲಾದ ವಿಚಾರಗಳನ್ನು ತಿಳಿಸಲು ಕೇಳಿಕೊಂಡನು. ಅವನ ವಿಚಾರವನ್ನು ಕೂಲಂಕಷವಾಗಿ ವಿಮರ್ಶಿಸಿದ ಜ್ಯೋಯಿಸರು, 'ನೀನು 75 ವರ್ಷಗಳ ಕಾಲ ಆರೋಗ್ಯವಂತನಾಗಿ ಬಾಳುವೆ. ಆದರೆ 60 ವರ್ಷಗಳವರೆಗೆ ಈ ಕಷ್ಟ ತಪ್ಪಿದ್ದಲ್ಲ' ಎಂದು ಹೇಳಿದನು. ಶೇಖರನು ಪುನಃ, '60 ವರ್ಷಗಳಾದ ಮೇಲೆ ನನ್ನ ಅದೃಷ್ಟ ಖುಲಾಯಿಸುವುದೇ' ಎಂದು ಪ್ರಶ್ನಿಸಿದನು. ಅದಕ್ಕೆ ಉತ್ತರಿಸಿದ ಜೋಯಿಸ, 'ಅದು ಉತ್ತಮವಾಗುವ ಸಂಭವವಿಲ್ಲ. ಆದರೆ ಅದುವರೆಗೂ ಕಷ್ಟವನ್ನು ಅನುಭವಿಸಿ ಅಭ್ಯಾಸವಿರುವುದರಿಂದ ಮುಂದಿನ ಕಷ್ಟ ಅಷ್ಟು ಶ್ರಮದಾಯಕ ವಾಗಿ ಕಾಣಿಸುವುದಿಲ್ಲ ' ಎಂದು ಹೇಳಿ ಕಳಿಸಿದನು.

। ಶ್ರೀವಲ್ಲಿ, 9ನೇ ತರಗತಿ



# ಸ್ವಾತಂತ್ರ್ಯ ದಿನಾಚರಣೆಯಲ್ಲಿ 'ಸ್ವ-ತಂತ್ರ'

ಆಗಸ್ಟ್ 15 ರಂದು ಶಾಲೆಯಲ್ಲಿ 71ನೇ ಸ್ವಾತಂತ್ರ್ಯ ದಿನವನ್ನು ಆಚರಿಸಲಾಯಿತು. ಶಿಕ್ಷಕಿ ಮಹೇಶ್ವರಿ ಮತ್ತು ಪೋಷಕರಾದ ಶಿಲ್ಪಪಾಂಡೆ ಧ್ವಜಾರೋಹಣ ನೆರವೇರಿಸಿದರು. ಪ್ರತಿ ತರಗತಿಯ ಮಕ್ಕಳು ದೇಶಾಭಿಮಾನ, ಪ್ರೀತಿ, ಭಕ್ತಿ-ಗೌರವ ಸೂಚಕವಾಗಿ ಗಾಯನ, ನೃತ್ಯ, ನಾಟಕಗಳನ್ನು ಪ್ರಸ್ತುತ ಪಡಿಸಿದರು. ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಸಮೃದ್ಧಿ ಕಾಣಿಸಿತು. ಪೋಷಕರು ಪ್ರಸ್ತುತಪಡಿಸಿದ 'ಸ್ವ- ತಂತ್ರ' ನಾಟಕ ಸಮಯೋಚಿತವಾಗಿತ್ತು. ಕೊನೆಯಲ್ಲಿ ಎಲ್ಲರೂ ಸಿಹಿಯನ್ನು ಸವಿದರು.



ತಲಕಾಡು ದೇವಾಲಯಕ್ಕೆ ಭೇಟಿ ನೀಡಿದ್ದ 1 ರಿಂದ 3ನೇ ತರಗತಿ ಮಕ್ಕಳು ಹಾಗೂ ಶಿಕ್ಷಕರು.



# ದುಡ್ಡು....

ದುಡ್ಡು ಕಂಡ ಜನರಿಗೆಲ್ಲ ಆಸೆ ಬಂತು
ಆಸೆ ಬಂದ ಜನರೆಲ್ಲ ಸೇರಿದರು
ಅವರ ಯೋಚನೆ ಏನು ಇದೆಲ್ಲ?

ನಾವು ಏನು ಮಾಡುವುದು ಇವರಿಗೆಲ್ಲ
ಜನರ ಈ ಬುದ್ಧಿ ಮಂಕುತನಕ್ಕೆ
ಆಸೆಯ ಜನರು ಮಾರಿಕೊಂಡರು ಮನಸ್ಸೆಲ್ಲ

ಹಣವನ್ನು ಕಂಡ ಮನಸ್ಸಿಗೆ ಬಂತು ಜಲಸ್ಸು
ಇದರಿಂದ ಬಂದಿತು ಇನ್ನೂ ಹುರುಪು
ಆಮೇಲೆ ಆತನಿಗೆ ಬಂದಿತು ಜ್ವರ
ಕೊನೆಗೆ ಅವನಿಗೆ ಆಯಿತು ಅರಿವು



। ಅನನ್ಯ
7ನೇ ತರಗತಿ




1. Who invented electricity?
a) Micheal Farady
b) Thomas Alva Edison
c) Hans Lippershey
d) Benjamin Franklin

2. What was the invention of Charles Babbage?
a) Telephone b) Computor
c) Telescope d) Radio

3. Who invented the cell?
a) John Dolton
b) Anthony Wan Lee Van Hooke
c) Albert Einstien
d) Robert Hooke

4. Who invented the bulb?
a) Thomas Alva Edison
b) Alexander Graham bell
c) Isaac Newton
d) John Buldolf

5. Who invented Bicycle?
a) Karl Benz
b) Philo Farnsworth
c) Pierre Lallement
d) Bartholomeo Cristofori

6. Who invented Gravity?
a) Isaac Newton
b) Galilieo Galilei
c) Albert Einstein
d) Guglilmo Marconi

Note: Answers will be published in the next edition.



**Chirant J**
Class 8

# A Mystery of a Monitor Lizard

Once I went to my uncle's farm near Tamilnadu. There I went to see an Asian Lizard and wanted to take some photographs. I went near a water body near the farm. For 3 hours,I waited to see a monitor lizard. But I didn't find it. I was feeling very sad. I was standing near the bushes. I heard someone saying "hey! See man. Down here" but I ignored. As I again heard these words , I went down. I saw a tortoise talking to me, "Hey! Friend I will help you to find a monitor lizard". I asked, how? He said "go to north of this farm and you will find an old eagle. It will help to find a monitor lizard". I said "ok" and went about half a mile and saw an old eagle. It said "Come friend. I will show you the monitor lizard. He is staying in the eastern part of this farm. But don't go straight in the east direction , instead go in the north -east direction" . Saying that it flew away. I moved in north- east direction and saw a bush. As I pushed the bush, a monitor lizard came in my direction to bite me. But I felt it came to kiss me and suddenly I heard someone calling "Pradhyumna its late" . But I ignored and I was about to click the picture. At that time someone shaked me. I opened my eyes and saw my mom. Then I realised that it was a dream. But remembering that thrilling, mysterical dream, I still enjoy it.



| **Pradhyumna**
Class 9

# A Man becomes a New Man

A man went to the forest with an axe to cut some trees. Once he entered the forest, he saw big trees, flowers, butterflies, deer, rabbit running, he felt so happy that he forgot about cutting trees.

Then he saw a crow calling all its friends to share a piece of fruit, he felt ashamed as he was not sharing. He learnt a lesson to share. Then he saw a lion and a deer walking close to each other, but the lion did not eat the deer as he was not hungry. The man realised his greed to collect more than his need. He learnt a lesson not to over collect. After this the man went back to his house remembering his family as a "New - Man". | **Yamini** Class 6



# What is Life?

Life is beautiful and every moment a celebration of being alive, but one should be always ready to face adversity and challenges. A person who has no difficulties in life can never achieve success.

Difficulties test the courage, patience, perseverance and true character of a human being. There is no doubt that there can be no gain without pain. It is only when one foils and sweats it out that success is nourished and sustained.

Happiness- sorrow, victory- defeat, day- night are the two sides of the same coin. Similarly life is full of moments of joy, pleasure, success, and comfort punctuated. There is no human being on earth strong, powerful, and wise or rich, who has not experienced, struggle, suffering or failure.

| **Megha S.** Class 8



# OKAY!!!!



Okay OK ok
"OK, I will do that"
"Ok that is fine"
"Is that ok?"
"Ok bye"
"I want this job done ok"

Okay is the commonly used term when people converse.

Okay is an English word denoting approval, acceptance, agreement, assent or acknowledgement. It is also described as most frequently used word.

Ok's original presentation was as "all correct" was later varied with spellings such as "oll korrect" or "Orl Korrekt". It is also said that "oll Korrect" is a humorous misspelling of "all correct". In the United States and much of Europe a related gesture is made touching the index finger with the thumb (forming a rough circle).

Ok is a wide spread word than any other. Yet nobody really knows for sure how it originated. There are many stories and theories about the origin of the word ok . One theory says, it originated in Boston, in the early 19th century, a time when it was trendy to use playful abbreviations.

While OK became part of the popular lexicon, its origins were disputed for more than a century. Some linguists pointed to Van Buren and Jackson. Others thought it was based on the manufacturer of a popular army biscuit, Orrin Kendall, or a Choctaw chief named Old Keokuk. President Woodrow Wilson thought it evolved from a Choctaw word that he spelled "okeh."

It wasn't until American linguist Allen walker (an American etymologist,best known for his studies into the word OK)researched the earliest known use of "ok " which was printed in the "Boston morning post" an american newspaper, on 23rd march edition, in the year 1839. On 23rd March of

Ok is celebrating its 178th year anniversary.

So let's say OK to Ok.

| **Divyashree B.N., Teacher**